# ಸಂಪನ್ಮೂಲ ಪುನರಾವಲೋಕನ

## ಚಟುವಟಿಕೆ ಹಾಳೆ I: ನಿಮ್ಮ ಆಕಾಶದಲ್ಲಿನ ಹದ್ದುಗಳು

Azim Premji University

‘ಆಲ್ ದಟ್ ಬ್ರೀತ್ಸ್’ ಚಲನಚಿತ್ರದ ಭಿತ್ತಿಪತ್ರದಲ್ಲಿನ ಪಕ್ಷಿಯು ಒಂದು ಕಪ್ಪು ಹದ್ದು. ನೀವು ಈ ಹಕ್ಕಿಗಳನ್ನು ತ್ಯಾಜ್ಯ ವಸ್ತುಗಳನ್ನು ತುಂಬುವ ಸ್ಥಳಗಳಲ್ಲಿ ಮತ್ತು ಕಸವನ್ನು ಸುರಿಯುವ ಜಾಗಗಳಲ್ಲಿ ಆಹಾರವನ್ನು (ಸತ್ತ ಪ್ರಾಣಿಗಳನ್ನು) ಹುಡುಕುತ್ತಾ ಮೇಲೆ ಹಾರಾಡುತ್ತಿರುವುದನ್ನು ಅಥವಾ ಜೀವಂತ ಮೀನುಗಳನ್ನು, ಇಲಿ –ಹೆಗ್ಗಣಗಳನ್ನು, ಬಾವಲಿಗಳನ್ನು ಅಥವಾ ಸಣ್ಣ ಪ್ರಾಣಿಗಳನ್ನು ಹಿಡಿಯಲು ಕೆಳಕ್ಕೆ ಎರಗುತ್ತಿರುವುದನ್ನು ನೋಡಿರಬಹುದು. ಭಾರತದಲ್ಲಿ ಕಂಡು ಬರುವ ನಾಲ್ಕು ರೀತಿಯ ಹದ್ದುಗಳಲ್ಲಿ ಇಲ್ಲಿರುವುದು ಒಂದು ರೀತಿಯವು.




### ನೋಡಿ ಮತ್ತು ಚರ್ಚಿಸಿ

- ಹಾರಾಡುತ್ತಿರುವ ವಿವಿಧ ರೀತಿಯ ಹದ್ದುಗಳ ಛಾಯಾಚಿತ್ರಗಳನ್ನು ಕೆಲವು ನಿಮಿಷಗಳ ಕಾಲ ಗಮನಿಸಿ. ಅವುಗಳಿಗೆ ಮತ್ತು ನಿಮ್ಮ ನೆರೆಹೊರೆಯಲ್ಲಿ ಇರುವ ಬೇರೆ ಹಕ್ಕಿಗಳಿಗೆ ಸಮಾನವಾಗಿರುವ ಅಥವಾ ಭಿನ್ನವಾಗಿರುವ ಯಾವುದಾದರೂ ಲಕ್ಷಣಗಳನ್ನು ನೀವು ಗುರುತಿಸಲು ಸಾಧ್ಯವೇ?

- ನಿಮಗೆ ನಾಲ್ಕು ವಿಭಿನ್ನ ರೀತಿಯ ಹದ್ದುಗಳನ್ನು ಗುರುತಿಸಲು ಸಾಧ್ಯವೇ? ಅವುಗಳ ನಡುವೆ ಇರುವ ಅತ್ಯಂತ ಮುಖ್ಯ ವ್ಯತ್ಯಾಸಗಳೇನು?

- ಕೆಳಗಿರುವ ಕೋಷ್ಟಕದ ಎಡಗಡೆಯಲ್ಲಿ ಈ ಹಕ್ಕಿಗಳ ಕೆಲವೊಂದು ಲಕ್ಷಣಗಳಿವೆ. ಆಕಾಶದಲ್ಲಿ ನೋಡಿದಾಗ ಇವುಗಳಲ್ಲಿ ಒಂದು ಅಥವಾ ಹೆಚ್ಚಿನ ಲಕ್ಷಣಗಳು ನಿಮಗೆ ಕಾಣಬಹುದು ಈ ಲಕ್ಷಣಗಳನ್ನು ನೀವು ನಿಮ್ಮ ಸ್ನೇಹಿತರಿಗೆ ಹೇಗೆ ವಿವರಿಸುತ್ತೀರಿ? ಉದಾಹರಣೆಗೆ ಅವುಗಳ ಚಿತ್ರಗಳಲ್ಲಿ ಅವುಗಳ ಗಾತ್ರ, ಆಕಾರ ಮತ್ತು ಬಣ್ಣಗಳಿಗೆ ಸಂಬಂಧಿಸಿದಂತೆ ನಿಮಗೆ ಏನು ಕಾಣುತ್ತದೆ ಎಂದು ಯೋಚಿಸಿ.

| **ಇದು ಹೇಗೆ ಕಾಣುತ್ತದೆ?** | **(ಎ)** | **(ಬಿ)** | **(ಸಿ)** | **(ಡಿ)** |
|---|---|---|---|---|
| ತಲೆ | | | | |
| ಕಣ್ಣುಗಳು | | | | |
| ಕೊಕ್ಕು | | | | |
| ರೆಕ್ಕೆಗಳು | | | | |
| ಬಾಲ | | | | |
| ದೇಹ | | | | |

- ಹಕ್ಕಿಗಳನ್ನು ನಿಯತವಾಗಿ ವೀಕ್ಷಿಸುವವರು (ಪಕ್ಷಿ ವೀಕ್ಷಕರು) ಈ ಹದ್ದುಗಳನ್ನು ಕೆಲವೊಂದು ನಿರ್ದಿಷ್ಟ ಹೆಸರುಗಳಿಂದ ಕರೆಯುತ್ತಾರೆ. ಅದು ಹೇಗೆ ಕಾಣುತ್ತದೆ ಎನ್ನುವ ಆಧಾರದ ಮೇಲೆ ಪ್ರತಿಯೊಂದು ಹದ್ದನ್ನು ಗುರುತಿಸಲು ನಮಗೆ ಈ 'ಸಾಮಾನ್ಯ' ಹೆಸರುಗಳು ನೆರವಾಗಬಹುದು. ಈ ಪಕ್ಷಿಗಳ ಸಾಮಾನ್ಯ ಹೆಸರುಗಳನ್ನು ಮತ್ತು ಛಾಯಾಚಿತ್ರಗಳನ್ನು ನೀವು ಹೊಂದಿಸಬಹುದೇ?

| ಛಾಯಾಚಿತ್ರಗಳು. | ಸಾಮಾನ್ಯ ಹೆಸರುಗಳು |
|---|---|
| (ಎ) | ಬ್ರಾಹ್ಮಿಣಿ ಹದ್ದು |
| (ಬಿ) | ಕಪ್ಪು ರೆಕ್ಕೆಗಳ ಹದ್ದು |
| (ಸಿ) | ಕಪ್ಪು ಕಿವಿಗಳ ಹದ್ದು |
| (ಡಿ) | ಕಪ್ಪು ಹದ್ದು |

- ಇಲ್ಲಿರುವ ಹದ್ದುಗಳಲ್ಲಿ ಯಾವುದಕ್ಕಾದರೂ ನೀವು ವಿಭಿನ್ನವಾದ ಸಾಮಾನ್ಯ ಹೆಸರನ್ನು ಯೋಚಿಸಬಹುದೇ? ಅದು ಇಂಗ್ಲಿಷಿನಲ್ಲಿ ಆಗಿರಬಹುದು ಅಥವಾ ಮತ್ತಾವುದೇ ಭಾಷೆಯಲ್ಲಿ ಆಗಿರಬಹುದು. ನಿಮ್ಮ ಸ್ನೇಹಿತರು ಗುರುತಿಸಲಿಕ್ಕೆ (ಹಾರಾಡುತ್ತಿರುವಾಗ ಸಹ) ಆಗುವಂತಹ ಹೆಸರನ್ನು ಆಯ್ಕೆ ಮಾಡಿ. ತೀರ ಉದ್ದವಿಲ್ಲದ ಮತ್ತು ನೆನಪಿನಲ್ಲಿಟ್ಟುಕೊಳ್ಳಲು ಕಷ್ಟವಾಗದ ಒಂದು ಹೆಸರನ್ನು ಪ್ರಯತ್ನಿಸಿ.

- ನೀವು ಕಾಣುವ ಆಕಾಶದಲ್ಲಿ ಈ ಪಕ್ಷಿಗಳಿಗಾಗಿ ಹುಡುಕಿ. ನಂತರ ಈ ಕೆಳಗಿನ ಕೋಷ್ಟಕದಲ್ಲಿ ನಿಮ್ಮ ವೀಕ್ಷಣೆಗಳನ್ನು ದಾಖಲಿಸಿ.

| | (ಎ) | (ಬಿ) | (ಸಿ) | (ಡಿ) |
|---|---|---|---|---|
| ನೀವು ಈ ಹಕ್ಕಿಯನ್ನು ಆಗಸದಲ್ಲಿ ನೋಡಿದ್ದೀರಾ? | | | | |
| ಯಾವಾಗ (ದಿನದ ಯಾವ ಹೊತ್ತಿನಲ್ಲಿ) ಈ ಹಕ್ಕಿಯನ್ನು ಆಗಸದಲ್ಲಿ ನೋಡಿದ್ದೀರಿ? | | | | |
| ಈ ಹಕ್ಕಿ ಎಷ್ಟು ದೊಡ್ಡದು? ನೀವು ಇದನ್ನು ಕಾಗೆಗೆ ಹೋಲಿಸಿ ಹೇಳಬಹುದು. | | | | |
| ಅದರ ರೆಕ್ಕೆಗಳು ಎಷ್ಟು ದೊಡ್ಡದಿವೆ? ನೀವು ಅದನ್ನು ಅದರ ದೇಹದ ಉದ್ದಕ್ಕೆ ಹೋಲಿಸಬಹುದು. | | | | |
| ಅದರ ಹಾರಾಟವನ್ನು ನೀವು ನಿಮ್ಮ ಸ್ನೇಹಿತರಿಗೆ ಹೇಗೆ ವಿವರಿಸುತ್ತೀರಿ? | | | | |
| ಈ ಪಕ್ಷಿಯು ಬೇಟೆಯಾಡುವುದನ್ನು ಅಥವಾ ತಿನ್ನುವುದನ್ನು ನೀವು ನೋಡಿದ್ದೀರಾ? ಅದು ಏನನ್ನು ತಿನ್ನುತ್ತದೆ? | | | | |
| ಅದು ಬೇಟೆಯಾಡಲು ಹಾಗೂ ತಿನ್ನಲು ತನ್ನ ಕೊಕ್ಕುಗಳನ್ನು ಮತ್ತು ಉಗುರುಗಳನ್ನು ಹೇಗೆ ಉಪಯೋಗಿಸುತ್ತದೆ? | | | | |
| ಈ ಪಕ್ಷಿಯ ಕುರಿತು ನೀವು ಇನ್ನಿತರ ಯಾವ ವಿವರಗಳನ್ನು ಗಮನಿಸಿದ್ದೀರಿ? | | | | |

## ಛಾಯಾಚಿತ್ರದ ಮೂಲಗಳು

ಎ. Ron Knight from Seaford, East Sussex, United Kingdom, Wikimedia Commons. URL: https://bit.ly/41GkEvo. License: CC-BY 2.0. Generic Deed.

ಬಿ. Dr. Raju Kasambe, Wikimedia Commons. URL: https://bit.ly/3Dfndul. License: CC-BY-SA 4.0 International Deed.

ಸಿ. Dhaval Vargiya, Wikimedia Commons. URL: https://commons.wikimedia.org/wiki/File:Black-winged_Kite_at_Rajkot.jpg. License: CC-BY-SA 4.0 International Deed.

ಡಿ. Rakeshkdogra, Wikimedia Commons. URL: https://commons.wikimedia.org/wiki/File:Brahminy-kite.jpg. License: CC-BY-SA 3.0 Unported Deed.

ಐ ವಂಡರ್...
ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್

**ಕೊಡುಗೆ:**
**ಚಿತ್ರಾ ರವಿ,** ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಾರೆ.

ಅನುವಾದ: **ಬಿ. ಆರ್. ಮಂಜುನಾಥ್** | ಪರಿಶೀಲನೆ: **ಎಚ್. ಜಿ. ಜಯಲಕ್ಷ್ಮಿ**